**ವಿಜಯಪುರ ಜಿಲ್ಲಾ ಪೊಲೀಸ್**

**ಪತ್ರಿಕಾ ಪ್ರಕಟಣೆ**

ವಿಜಯಪುರ.

ದಿನಾಂಕ: 02.08.2021

# ಗಂಧದ ಮರಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪಿತರ ಬಂಧನ.

***

ವಿಜಯಪುರ ಜಿಲ್ಲೆಯಲ್ಲಿ ಇತ್ತಿಚಿಗೆ ಘಟಿಸುತ್ತಿದ್ದ ಗಂಧದ ಮರ ಕಳ್ಳತನ ಪ್ರಕರಣದ ತಪಾಸಣೆ ಕುರಿತು ಶ್ರೀ. ಹೆಚ್.ಡಿ. ಆನಂದಕುಮಾರ್, ಪೊಲೀಸ್ ಅಧೀಕ್ಷಕರು ವಿಜಯಪುರ, ಮತ್ತು ಶ್ರೀ ರಾಮ್.ಎಲ್. ಅರಸಿದ್ದಿ, ಹೆಚ್ಚುವರಿ ಪೊಲೀಸ ಅಧೀಕ್ಷಕರು ವಿಜಯಪುರ, ಶ್ರೀ ಕೆ.ಸಿ.ಲಕ್ಷ್ಮೀನಾರಾಯಣ ಡಿ.ಎಸ್.ಪಿ ವಿಜಯಪುರ, ಇವರ ಮಾರ್ಗದರ್ಶನದಲ್ಲಿ ಶ್ರೀ ಎಸ್.ಬಿ.ಪಾಲಭಾವಿ ಸಿಪಿಐ ವಿಜಯಪುರ ಗ್ರಾಮೀಣ ವೃತ್ತ, ಶ್ರೀ ರವೀಂದ್ರ ನಾಯ್ಕೋಡಿ, ಪಿಐ ಗಾಂಧಿಚೌಕ ಪಿಎಸ್ ರವರ ಇವರ ನೇತೃತ್ವದಲ್ಲಿ ಹಾಗೂ ಶ್ರೀ ಜಿ.ಎಸ್.ಉಪ್ಪಾರ ಪಿ.ಎಸ್.ಐ ಗ್ರಾಮೀಣ ಪಿ.ಎಸ್. ಹಾಗೂ ಸಿಬ್ಬಂಧಿ ಜನರಾದ, ಪಿ,ಎಸ್, ಗಬ್ಬೂರ, ಆರ್,ಎಮ್, ಖಾನಾಪೂರ, ಎಲ್.ಎಸ್. ಹಿರೆಗೌಡರ, ಆರ್.ಡಿ.ಅಂಜುಟಗಿ, ಶಿವಾನಂದ ಡೆಂಗಿ, ಶಿವಾನಂದ ಬೊಮ್ಮನಳ್ಳಿ, ಎಮ್ ಬಿ ಜನಗೊಂಡ, ಪರಶುರಾಮ ವಾಲಿಕಾರ, ಐ.ವಾಯ್.ದಳವಾಯಿ, ಚೇತನ ಮಲಗೌಡರ, ಪ್ರಬು ಕೊಳೂರ ಇವರನ್ನೊಳಗೊಂಡ ಒಂದು ತನಿಖಾ ತಂಡವನ್ನು ರಚನೆ ಮಾಡಿದ್ದು,

ಸದರಿ ತನಿಖಾ ತಂಡವು ಗಂಧದ ಕಳ್ಳತನ ಮಾಡುವ ಆರೋಪಿತರ ಪತ್ತೆ ಕಾರ್ಯದಲ್ಲಿರುವಾಗ ದಿನಾಂಕ: 02.08.2021 ರಂದು ನಸುಕಿನ 04:30 ಗಂಟೆಗೆ ತೊರವಿ ಗ್ರಾಮದ ಹತ್ತಿರ ಅತ್ತಾಲಟ್ಟಿ ರಸ್ತೆಗೆ ಒಂದು ಸಂಶಯುಕ್ತ ಅಟೋ ಬಂದಿದ್ದು, ಸದರಿ ಅಟೋವನ್ನು ನಿಲ್ಲಿಸಿ ನೋಡಲಾಗಿ ಅದರಲ್ಲಿ ನಾಲ್ಕು ಜನರು ಹಾಗೂ ತುಂಬಿದ ಚೀಲಗಳು ಇದ್ದು, **ಆರೋಪಿತರಾದ**

**1] ಮಾರುತಿ ತಂದೆ ಸಂಗಪ್ಪ ಬಜಂತ್ರಿ, ಸಾ॥ ಕವಳಿ, ತಾ॥ ಅಥಣಿ,**

**2] ಸಂಜು ತಂದೆ ದತ್ತು ಬಜಂತ್ರಿ, ಸಾ॥ ವಿಜಯಪುರ ಮದಿನಾ ನಗರ,**

**3] ಮಲ್ಲಪ್ಪ ತಂದೆ ಗುರಪ್ಪ ಜನಗೌಡ, ಸಾ॥ ಕಕಮರಿ ತಾ॥ ಅಥಣಿ,**

ಆರೋಪಿತರನ್ನು ಠಾಣೆಗೆ ತಂದು ವಿಚಾರಣೆ ಮಾಡಲಾಗಿ, ಆರೋಪಿತರು ಕಳ್ಳತನದಿಂದ ಮರಗಳನ್ನು ಕಡಿದು ತಂದು ಈಗ ಅಥಣಿಗೆ ಮಾರಾಟ ಮಾಡಲು ಹೊರಟಿದ್ದೇವು ಅಂತಾ ಒಪ್ಪಿಕೊಂಡಿರುತ್ತಾರೆ.

**ಆರೋಪಿತರ ಕಡೆಯಿಂದ**

1] ಗಂಧದ ಮರದ ತುಂಡುಗಳನ್ನು ಇರುವ ಚೀಲಗಳು ಅವುಗಳ ಒಟ್ಟು ತೂಕ 40 ಕೆಜಿ ಇದ್ದು, ಒಟ್ಟು ಅ॥ಕಿ॥ 4, 00,000/- ರೂಪಾಯಿ

2] ಅಟೋ ಒಂದು ಅದರ ನಂ ಕೆಎ-28/- ಸಿ- 9306 ಇದರ ಅ॥ಕಿ॥ 150000/-ರೂ

3] ಮೋಬೈಲ್‌ಗಳು 03 ಅ॥ಕಿ॥ 15,000/-ರೂ

4] ತಕ್ಕಡಿ ಒಂದು ಅ॥ಕಿ॥ 2,000/-ರೂ

5] ಗರಗಸ ಒಂದು ಕಟ್ಟಿಗೆ ಕೊರೆಯುವುದು. ಅ॥ಕಿ॥ 1500/- ಹೀಗೆ ಒಟ್ಟು ಅಂದಾಜು 5 ಲಕ್ಷ ರೂ ಕಿಮ್ಮತ್ತಿನ ಮಾಲುಗಳು ಇವುಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದನ್ನು ವಿಜಯಪುರ ಗ್ರಾಮೀಣ ಪೊಲೀಸ್ ಠಾಣಾ ಗುನ್ನಾ ನಂ 236/2021 ಕಲಂ 379 ಐಪಿಸಿ , 86, 87 ಕೆಎಪ್ ಯಾಕ್ಟ ಹಾಗೂ 41 (ಡಿ) ಸಿಆರ್‌ಪಿಸಿ ನೇದಕ್ಕೆ ಪ್ರಕರಣ ದಾಖಲಿಸಿ ತನಿಖೆ ಕೈಕೊಂಡಿದ್ದು ಇರುತ್ತದೆ.

ಈ ಪ್ರಕರಣದಲ್ಲಿ ಕರ್ತವ್ಯ ನಿರ್ವಹಿಸಿದ ಎಲ್ಲ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಜನರ ಕರ್ತವ್ಯವನ್ನು ವಿಜಯಪುರ ಜಿಲ್ಲಾ ಪೊಲೀಸ್ ಅಧಿಕ್ಷಕರು ಶ್ಲಾಘಿಸಿರುತ್ತಾರೆ.

ಪೊಲೀಸ್ ಅಧೀಕ್ಷಕರು,
ವಿಜಯಪುರ ಜಿಲ್ಲೆ.

ಗೆ,

ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ವಿಜಯಪುರ.
ಹಾಗೂ ವಿಜಯಪುರ. ಜಿಲ್ಲೆಯ ಎಲ್ಲ ಪತ್ರಕರ್ತಕರು ಹಾಗೂ ಛಾಯಾಗ್ರಾಹಕರು

